



# ನೆರಳಿನೊಡನೆ ಚೆಲ್ಲಾಟ

■ ಚಿತ್ರ–ಲೇಖನ:
**ಆರ್. ವಿಶ್ವನಾಥ್**



ಪ್ರಪಂಚದಾದ್ಯಂತ ಪ್ರಚಲಿತವಿರುವ ವಿವಿಧ ಪುರಾತನ ಕಲಾ ಪ್ರಕಾರಗಳಲ್ಲಿ ನೆರಳಿನ ಆಟ (ಶ್ಯಾಡೋ ಪ್ಲೇ ಅಥವಾ ಶ್ಯಾಡೋಗ್ರಾಫಿ) ಕೂಡಾ ಒಂದು. ಜಾತಿ, ಬಣ್ಣ, ಅಳತೆ ಇದ್ಯಾವುದರ ಬೇಧಭಾವವೂ ಇಲ್ಲದೆ ಇಲ್ಲಿ ನೆರಳು ಒಂದೇ ರೂಪ ಪಡೆಯುತ್ತದೆ. ನೆರಳಿನ ಆಟ ಒಂದು ಪ್ರಾಚೀನ ಕಲೆ, ಸಾವಿರಾರು ವರ್ಷಗಳ ಇತಿಹಾಸ ಹೊಂದಿದೆ.

ಚೀನಾ, ಫ್ರಾನ್ಸ್, ಭಾರತ, ಕಾಂಬೋಡಿಯಾ, ಶ್ರೀಲಂಕಾ– ಹೀಗೆ 20ಕ್ಕೂ ಹೆಚ್ಚು ದೇಶಗಳಲ್ಲಿ ಪ್ರಚಲಿತವಿರುವ ಈ ಕಲೆ ವಿಶ್ವದಾದ್ಯಂತ ಪ್ರಸಿದ್ಧಿ ಪಡೆದಿದೆ.

ಈ ದೇಶಗಳ ಪೌರಾಣಿಕ, ಜಾನಪದ ಹಾಗೂ ಪುಣ್ಯಕಥೆಗಳ ಸನ್ನಿವೇಶಗಳನ್ನು, ಕಥೆಯ ರೂಪದಲ್ಲಿ ಪರದೆಯ ಮೇಲೆ ಬೆಳಕಿನ ಮೂಲಕ ಕಲಾವಿದನ ಕೈಚಳಕದಲ್ಲಿ ರೂಪಿಸುವುದನ್ನು ನೋಡುವುದೇ ಒಂದು ರೋಮಾಂಚನ.

ನಿಗದಿತ ಸಮಯದಲ್ಲಿ ಬೆಳಕನ್ನು ಹಿನ್ನೆಲೆಯಾಗಿ ಇಟ್ಟುಕೊಂಡು ಕೈಬೆರಳುಗಳನ್ನು ಲೀಲಾಜಾಲವಾಗಿ ಚಲಿಸುತ್ತಾ ಪರದೆಯ ಮೇಲೆ ಪ್ರಾಣಿ, ಪಕ್ಷಿ ಹಾಗೂ ಇತರ ಆಕೃತಿಗಳನ್ನು ಮೂಡಿಸುವ ಕಲೆ ಹಾಗೂ ಅದಕ್ಕೆ ಅನುಗುಣವಾಗಿ ಕಥೆಯ ನಿರೂಪಣೆ ನೋಡುಗರನ್ನು ಮಂತ್ರಮುಗ್ಧರನ್ನಾಗಿಸುತ್ತದೆ.

ರಾಮಾಯಣ, ಮಹಾಭಾರತ, ಭಗವದ್ಗೀತೆ ಹಾಗೂ ಶಿವಲೀಲೆ– ಹೀಗೆ ಜನಸಾಮಾನ್ಯರಿಗೆ ಅರ್ಥವಾಗುವಂತೆ ತಿಳಿಸಿ ಹೇಳುವ ಹರಿಕಥೆ ಎಲ್ಲರಿಗೆ ತಿಳಿದಿರುವ ಸಂಗತಿ. ಹರಿಕಥೆ ರೂಪದಲ್ಲಿ ಇದರ ಇನ್ನೊಂದು ಸ್ವರೂಪ ಪಡೆದಿರುವ ಆಂಧ್ರಪ್ರದೇಶದ ತೋಟ ಬೊಬ್ಬಲಾಟ ಅಥವಾ ಸೂತ್ರದ ಬೊಂಬೆ ಆಟವೂ ಪ್ರಸಿದ್ಧಿ ಪಡೆದಿದೆ.



ಬೆಂಗಳೂರಿನ ನಿವಾಸಿಯಾಗಿದ್ದ ದಿ. ರಾಘವೇಂದ್ರ ಈ ಕಲೆಯನ್ನು ಸುಮಾರು 50 ವರ್ಷಗಳ ಕಾಲ ಅಭ್ಯಸಿಸಿ ಕರಗತ ಮಾಡಿಕೊಂಡಿದ್ದರು. ತಮ್ಮ ಜೀವಿತಾವಧಿಯಲ್ಲಿ ಸುಮಾರು 12,000ಕ್ಕೂ ಹೆಚ್ಚು ಪ್ರದರ್ಶನಗಳನ್ನು ಅವರು ದೇಶದ ಹಲವೆಡೆ ನೀಡಿದ್ದಾರೆ. ವಿಶ್ವ ನಗೆ ಸಮ್ಮೇಳನ (ವರ್ಲ್ಡ್ ಹ್ಯೂಮರ್ ಡೇ) ಹಾಗೂ ವಿಶ್ವ ಕನ್ನಡ ಸಮ್ಮೇಳನದಲ್ಲೂ ಅವರು ಪ್ರದರ್ಶನ ನೀಡಿದ್ದರು.

ರಾಘವೇಂದ್ರರ ಪುತ್ರ 33ರ ಹರೆಯದ ಸುಮಂತ್, ತಂದೆಯಿಂದ ಈ ಕಲೆಯನ್ನು ಕಲಿತಿದ್ದಾರೆ. ಕಳೆದ 12 ವರ್ಷಗಳಿಂದ ಈ ಕಲೆಯ ಅಭ್ಯಾಸದಲ್ಲೂ ತೊಡಗಿದ್ದಾರೆ. ವೃತ್ತಿಯಲ್ಲಿ 'ಸಾಫ್ಟ್‌ವೇರ್ ಎಂಜಿನಿಯರ್' ಆಗಿರುವ ಸುಮಂತ್, ಸಂಗೀತ ಕ್ಷೇತ್ರದಲ್ಲೂ ಸಾಧನೆ ನಡೆಸಿದ್ದಾರೆ. ಪಾಶ್ಚಿಮಾತ್ಯ ಹಾಗೂ ಭಾರತೀಯ ಸಂಗೀತದಲ್ಲಿ ಹೆಚ್ಚಿನ ಒಲವಿರುವ ಇವರು ವೀಣೆ, ಗಿಟಾರ್, ಡ್ರಮ್ಸ್ ಹಾಗೂ ಪಿಯಾನೊಗಳನ್ನು ಚತುರತೆಯಿಂದ ನುಡಿಸುತ್ತಾರೆ. ಹಲವಾರು ಪ್ರದರ್ಶನಗಳನ್ನೂ ನೀಡಿದ್ದಾರೆ.

ವೃತ್ತಿ ಎಲ್ಲಿ ಪ್ರವೃತ್ತಿಗೆ ತಡೆ ಒಡ್ಡುತ್ತದೋ ಎಂಬ ಅಳುಕಿನಿಂದ, ಇದೀಗ ಕಲೆಯನ್ನೇ ವೃತ್ತಿಯನ್ನಾಗಿಸಿದ್ದಾರೆ! ಖುದ್ದಾಗಿ 'ಸೈರಿಂಕ್ಸ್' ಎಂಬ ಸಂಗೀತ ಸಂಸ್ಥೆಯನ್ನು ಹುಟ್ಟುಹಾಕಿ, ಆಸಕ್ತರಿಗೆ ಸಂಗೀತ ಪಾಠ ಕಲಿಸುತ್ತಿದ್ದಾರೆ.

'ಇದೇನ್ರೀ.. ಒಳ್ಳೆ ಸಂಬಳ ಬರುವ ಸಾಫ್ಟ್‌ವೇರ್ ಕೆಲಸ ಬಿಟ್ಟು ಈ ಕಲೆಯನ್ನು ನಂಬಿಕೊಂಡು ಜೀವನ ನಡೆಸಲು ಮುಂದಾಗಿದ್ದೀರಿ?' ಎಂದು ಆಶ್ಚರ್ಯದಿಂದ ಕೇಳಿದರೆ, ಅವರು ನಗುತ್ತಾ 'ನನಗೆ ಕಲೆ ಎಲ್ಲವನ್ನು ತಂದುಕೊಟ್ಟಿದೆ. ಸಣ್ಣ ನೆಮ್ಮದಿ ಬಿಟ್ಟರೆ ಇನ್ನೇನು ಬೇಕು? ನಾನು ಈಗ ಸಂತೋಷವಾಗಿದ್ದೇನೆ' ಎಂದು ಉತ್ತರಿಸುತ್ತಾರೆ.

ಇವರ ಸಾಧನೆಯನ್ನು ಗುರುತಿಸಿ ಸಂಗಾತಿ ಸಮಾಜ ಸೇವಾ ಸಂಘ 2009ರ ರಾಜ್ಯೋತ್ಸವದಂದು 'ಕನ್ನಡ ವೈಜಯಂತಿ' ಎಂಬ ಪ್ರಶಸ್ತಿ ನೀಡಿ ಗೌರವಿಸಿದೆ. ಬೆಂಗಳೂರು ಜೆಪಿ ನಗರದ ರೋಟರಿ ಸಂಸ್ಥೆ 'ಛಾರ್ಟರ್ ನೈಟ್' ದಿನಾಚರಣೆಯಂದು 'ಯುವ ಸಾಧಕ' ಎಂಬ ಬಿರುದು ನೀಡಿ ಗೌರವಿಸಿದೆ. ಇನ್ನೂ ಹಲವು ಪ್ರಶಸ್ತಿ–ಪುರಸ್ಕಾರಗಳನ್ನು ಮುಡಿಗೆ ಏರಿಸಿಕೊಂಡಿರುವ ಸುಮಂತ್‌ರದ್ದು ಬಹುಮುಖ ಪ್ರತಿಭೆ.